









## ಸ್ವಸಹಾಯ ಸಂಘದ ರಚನೆ ಮತ್ತು ಸ್ವ-ಉದ್ಯೋಗದಲ್ಲಿ ಆಸಕ್ತಿ ಇರುವ ಸದಸ್ಯರು/ಸಿದ್ಧಿ ಸಮುದಾಯದ ಕುಟುಂಬದವರು;

### ಸಂಪರ್ಕಿಸಬೇಕಾದ ವಿಳಾಸ

ಶಾಖಾ ಕಛೇರಿ:

**ಮನುವಿಕಾಸ (ರಿ)**

ಗೀತಾ ಭವನದ ಹತ್ತಿರ, ಬಸ್‌ಸ್ಟ್ಯಾಂಡ್ ಹಿಂಭಾಗ, ಯಲ್ಲಾಪುರ, ಉ.ಕ
ದೂ: ಚಂದನಾ ನಾಯ್ಕ : 8073716524

ಮುಖ್ಯಕಛೇರಿ ವಿಳಾಸ :

**ಮನುವಿಕಾಸ (ರಿ.)**

ಮಂಗೇಶ ಮಹಾಲಕ್ಷ್ಮೀ ಬಿಲ್ಡಿಂಗ್, ಆಂಜನೇಯ ದೇವಸ್ಥಾನದ ಹಿಂಭಾಗ
ವಿಜಯನಗರ, ಶಿರಸಿ ಮೊ : 9845982552

Website : www.manuvikasa.org

I Multi Offset 9449453234 I

MANUVIKASA

# ಮನುವಿಕಾಸ

**ಶಿಕ್ಷಣ, ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ**

ಸಹಕಾರ HDFC BANK PARIVARTAN A step towards sustainable progress

ಮನುವಿಕಾಸ ಒಂದು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿದ್ದು 2003ನೇ ಇಸ್ವಿಯಲ್ಲಿ ನೋಂದಣಿಗೊಂಡು [ರಜಿಸ್ಟರ್ ನಂಬರ್ 171/ 03–04] ಶಿಕ್ಷಣ, ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಹಾವೇರಿ, ಶಿವಮೊಗ್ಗ, ಧಾರವಾಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಮಾಜದ ಬೇರೆ ಬೇರೆ ಸ್ಥರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾನ ಮನಸ್ಕರ ಗುಂಪು ಈ ಸಂಸ್ಥೆಯನ್ನು ಹುಟ್ಟು ಹಾಕಿದೆ. ಬಡತನ ನಿವಾರಣೆ, ಮಹಿಳಾ ಸಬಲೀಕರಣ, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ, ವಿವಿಧ ಸಾಮಾಜಿಕ ಸಮಸ್ಯೆಗಳ ವಿರುದ್ಧ ಜನಜಾಗೃತಿ, ಮಕ್ಕಳ ಹಕ್ಕು ಮತ್ತು ಮಾನವ ಹಕ್ಕುಗಳ ಅಳವಡಿಕೆ, ಉದ್ಯೋಗ ಸೃಷ್ಟಿ, ಆರೋಗ್ಯಸೇವೆ, ಅಂಗವಿಕಲರಿಗೆ ಸಹಾಯ ಮತ್ತಿತರೇ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ.

ಮನುವಿಕಾಸ ಸಂಸ್ಥೆಯು ಒಂದು ಜನಪರ ಸಂಘಟನೆಯಾಗಿ ಬೆಳೆದು ಬಂದಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಅಭಿರುಚಿಯಿರುವ ಯುವ ಸ್ವಯಂ-ಸೇವಕರ ಸಂಘಟನೆಯಾಗಿದೆ. ಸಂಸ್ಥೆಯು ಯಾವುದೇ ಆರ್ಥಿಕ ಲಾಭವನ್ನು ಬಯಸದೇ ಜನರ ಜೀವಂತ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದೆ. ನವಸಮಾಜ ನಿರ್ಮಾಣದ ಕನಸನ್ನು ಹೊತ್ತು ಶ್ರಮಿಸುತ್ತಿರುವ ಸಂಸ್ಥೆ ಬೇರೆ ಬೇರೆ ಉದ್ಯೋಗದಲ್ಲಿ ಇರುವ ಜನರಲ್ಲಿ ಗ್ರಾಮೀಣಾಭಿವೃದ್ದಿಯ ಕುರಿತು ಮಾಹಿತಿ ನೀಡಿ ಅವರನ್ನು ಗ್ರಾಮದ ಕಡೆ ಮುಖ ಮಾಡುವಂತೆ ಪ್ರೇರೇಪಿಸುತ್ತಿದೆ. ಸ್ಥಳೀಯ ಸಾರ್ವಜನಿಕರ ಸಹಕಾರದೊಂದಿಗೆ ಕೆಲಸ ನಿರ್ವಹಿಸುತ್ತಿದ್ದು, ಇತರ ಸಂಘ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಒಳ್ಳೆಯ ಸಂಬಂಧ ಹೊಂದಲು ಬಯಸುತ್ತದೆ. ಭ್ರಷ್ಟಾಚಾರ, ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ಮತ್ತು ದೀನದಲಿತರ ಮೇಲಿನ ಶೋಷಣೆ ಸಂದರ್ಭದಲ್ಲಿ ತಾರತಮ್ಯ ತೋರದೇ ವಿರೋಧಿಸುವ ಎದೆಗಾರಿಕೆಯನ್ನು ಸಂಸ್ಥೆ ಹೊಂದಿದೆ. ಒಟ್ಟಾರೆ ಜನರ ಸಹಭಾಗಿತ್ವವೇ ಅಭಿವೃದ್ಧಿಯ ಮೂಲಮಂತ್ರ ಎಂದು ನಂಬಿರುವ ಸಂಸ್ಥೆ ತನ್ನ ಎಲ್ಲ ಅಭಿವೃದ್ಧಿ





ಪರ ಚಟುವಟಿಕೆಗಳಲ್ಲಿ ಜನರ ಸಹಭಾಗಿತ್ವವನ್ನು, ತರಬೇತಿ ಮತ್ತು ತಾಂತ್ರಿಕತೆಗಳ ವರ್ಗಾವಣೆ ಮೂಲಕ ನಿರ್ವಹಿಸುತ್ತಿದೆ.

ಸಂಸ್ಥೆಯು ನಿರ್ಗತಿಕ ಮಕ್ಕಳ ಮತ್ತು ಕಡುಬಡ ಕುಟುಂಬದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಗಮನ ನೀಡುತ್ತಿದೆ. ನಿರ್ಗತಿಕ ಮಕ್ಕಳನ್ನು ಗುರುತಿಸಿ ಅವರಿಗೆ ಪಠ್ಯಪುಸ್ತಕ, ಬಟ್ಟೆ ಮತ್ತು ದಿನನಿತ್ಯ ಮನೆಬಳಕೆಯ ಮೂಲಭೂತ ವಸ್ತುಗಳನ್ನು ವಿತರಿಸಲಾಗುತ್ತಿದೆ. ಕಡುಬಡ ಕುಟುಂಬದ ಮಕ್ಕಳಿಗೆ ಕಲಿಕೋಪಕರಣ ಮತ್ತು ನಿರಂತರ ಕಲಿಕೆಗೆ ಪೂರಕ ಅಗತ್ಯ ವಸ್ತುಗಳನ್ನು ಒದಗಿಸಲಾಗುತ್ತಿದೆ. ಸಂಸ್ಥೆಯು ಕೆಲಸ ನಿರ್ವಹಿಸುತ್ತಿರುವ ಹಳ್ಳಿಗಳ ಆಯ್ದ ಮಕ್ಕಳಿಗೆ ಶಿಷ್ಯವೇತನ ವಿತರಿಸಲಾಗುತ್ತಿದೆ. ಅಂಗವಿಕಲ ಮಕ್ಕಳ ಅಭಿವೃದ್ಧಿಗೂ ಸಂಸ್ಥೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

## ಸಂಸ್ಥೆಯ ಸಾಧನೆಗಳು

- ಸಂಸ್ಥೆಯು 3390 ಕ್ಕೂ ಹೆಚ್ಚು ಸಣ್ಣ ಕೆರೆಗಳು ಮತ್ತು 224ಕ್ಕೂ ಹೆಚ್ಚು ದೊಡ್ಡ ಕೆರೆಗಳನ್ನು ನಿರ್ಮಿಸಿ 17000 ಕ್ಕೂ ಹೆಚ್ಚು ರೈತರಿಗೆ ಸಹಾಯ ನೀಡಿದೆ.
- ಮೂವತ್ತು ಸಾವಿರಕ್ಕೂ ಹೆಚ್ಚು ಮಹಿಳೆಯರನ್ನು ಸ್ವಸಹಾಯ ಸಂಘಗಳು ಮತ್ತು ಜಂಟಿ ಬಾಧ್ಯತಾ ಸಂಘಗಳ ಮೂಲಕ ಸಂಘಟಿಸಿ, ಸಾಲ ಸೌಲಭ್ಯ ಒದಗಿಸಿ, ಕೌಶಲ್ಯ ತರಬೇತಿಗಳನ್ನು ನೀಡಿ, ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡಿದೆ.














MANUVIKASA

# ಮನುವಿಕಾಸ ಸಂಸ್ಥೆ
# ಮತ್ತು
# ಎಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ

HDFC BANK PARIVARTAN
A step towards sustainable progress

**ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಜನರ ಆರ್ಥಿಕ ಸುಧಾರಣೆ ಮತ್ತು ರೈತ ಉತ್ಪಾದಕ ಸಂಸ್ಥೆಯ ಮೂಲಕ ಮುಂದಿನ ಮೂರು ವರ್ಷಗಳಲ್ಲಿ ಮೌಲ್ಯವರ್ಧಿತ ಉತ್ಪನ್ನಗಳೊಂದಿಗೆ ಗ್ರಾಹಕರನ್ನು ತಲುಪುವ ಯೋಜನೆ**

ಮನುವಿಕಾಸ ಸಂಸ್ಥೆಯು ಎಚ್.ಡಿ.ಎಫ್.ಸಿ. ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಆಯ್ದ 1000 ಸಿದ್ದಿ ಸಮುದಾಯದ ಕುಟುಂಬಗಳನ್ನು ಸಂಘಟಿಸಿ ಅವರ ಆರ್ಥಿಕ ಅಭಿವೃದ್ಧಿಗೆ ಹಾಗೂ ಸಾಮಾಜಿಕ ಬಲವರ್ಧನೆಗೆ ಕಾರ್ಯ ಯೋಜನೆಯನ್ನು ರೂಪಿಸಿದೆ.

## ಕಾರ್ಯಕ್ರಮಗಳು :

1. 100 ಮಹಿಳಾ ಸ್ವಸಹಾಯ ಸಂಘಗಳ ರಚನೆ, ತರಬೇತಿ ಕಾರ್ಯಗಾರ ಮತ್ತು ಬಲವರ್ಧನೆಗೆ ಹೆಚ್ಚಿನ ಆದ್ಯತೆ.
2. ಜೇನು ಸಾಕಾಣಿಕೆ ಕೃಷಿಗೆ ಉತ್ತೇಜನ, ಜೇನು ಸಾಕಾಣಿಕೆ ತರಬೇತಿ, ಮೌಲ್ಯವರ್ಧನೆ ಹಾಗೂ ಮಾರಾಟಕ್ಕೆ ರೈತ ಉತ್ಪಾದಕ ಕಂಪನಿಗಳ ಮೂಲಕ ಉತ್ತೇಜನ.
3. ತೋಟಗಾರಿಕೆ ಕೃಷಿಗೆ ಉತ್ತೇಜನ, ತುಂತುರು ನೀರಾವರಿಗೆ ಆದ್ಯತೆ ಹಾಗೂ ನೀರಾವರಿ ಸಲಕರಣೆಗಳ ಪೂರೈಕೆ.
4. ಮಹಿಳೆಯರಿಗೆ ಸ್ವಉದ್ಯೋಗಕ್ಕೆ ಉತ್ತೇಜನ ಹಾಗೂ ಪ್ರಾರಂಭಿಕ ಆರ್ಥಿಕ ನೆರವು.
5. ಸಿದ್ದಿ ಯುವಕ/ಯುವತಿಯರಿಗೆ 2 ತಿಂಗಳ ಉಚಿತ ಹೊಟೆಲ್ ಮ್ಯಾನೇಜಮೆಂಟ್ ತರಬೇತಿ.
6. ರೈತ ಉತ್ಪಾದಕ ಸಂಸ್ಥೆಯ ಮೂಲಕ ಸಿದ್ದಿ ಸಮುದಾಯದ ಜನರ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರಾಟ.
7. ಇನ್ನಿತರ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳು

ಈ ಎಲ್ಲ ಕಾರ್ಯಕ್ರಮಗಳನ್ನು ಯಲ್ಲಾಪುರ ತಾಲೂಕಿನ ಸಿದ್ದಿ ಸಮುದಾಯದ ಕುಟುಂಬಗಳಿಗೆ ಮಾತ್ರ ರೂಪಿಸಿದ್ದು, ಫಲಾನುಭವಿಗಳ ಆಯ್ಕೆ ನುರಿತ ತಜ್ಞರ ಸಮೀತಿಯ ಸಭೆಯಲ್ಲಿ ನಿರ್ಧರಿಸಲಾಗುವುದು.

## ತಾಲೂಕಿನಾದ್ಯಂತ ಸಂಸ್ಥೆಯು ಈಗಾಗಲೇ ಕೈಗೊಂಡ ಕಾರ್ಯಕ್ರಮಗಳು

1. ಸುಮಾರು 75ಕ್ಕೂ ಹೆಚ್ಚು ಮಹಿಳಾ ಸ್ವ ಸಹಾಯ ಸಂಘಗಳ ರಚನೆ ಹಾಗೂ ತರಬೇತಿ
2. 28 ಮಹಿಳೆಯರಿಗೆ ಸ್ವ–ಉದ್ಯೋಗದ ಪರಿಕರಗಳ ವಿತರಣೆ
3. 115 ಸಿದ್ದಿ ಕುಟುಂಬಗಳಿಗೆ ತೋಟಗಾರಿಕೆಗೆ ಹಾಗೂ ನೀರಾವರಿಗೆ ಅವಶ್ಯಕ ಪರಿಕರಗಳು ಹಾಗೂ ಅಡಿಕೆ ಸಸಿಗಳ ವಿತರಣೆ
4. ಸುಮಾರು 575 ಕುಟುಂಬಗಳಿಗೆ ತಲಾ 10 ರಂತೆ ಕೋಳಿಮರಿಗಳ ವಿತರಣೆ
5. ಪ್ರತಿಕುಟುಂಬಕ್ಕೆ 04 ರಂತೆ 145 ಕುಟುಂಬಗಳಿಗೆ ಜೇನು ಸಾಕಾಣಿಕೆ ಪೆಟ್ಟಿಗೆಗಳ ವಿತರಣೆ
6. 07 ಫಲಾನಿಭವಿಗಳಿಗೆ ರಸ್ತೆಬದಿ/ಹೊಟೆಲ್ ನಡೆಸಲು ಬೇಕಾದ ಪರಿಕರಗಳ ವಿತರಣೆ
7. 69 ಯುವಕ/ಯುವತಿಯರಿಗೆ ಉಚಿತ ಹೊಟೆಲ್ ಮ್ಯಾನೇಜಮೆಂಟ್ ತರಬೇತಿ ಹಾಗೂ ಉದ್ಯೋಗಾವಕಾಶ.